Vijaya Karnataka Pg-2

**ಬಿರುಬಿಸಿಲ ತಾಪ, ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಭೀತಿ**

# ವಿದ್ಯುತ್ ಬಳಕೆ ದಿಢೀರ್ ಹೆಚ್ಚಳ: ಒತ್ತಡದಲ್ಲಿ ಶಾಖೋತ್ಪನ್ನ ಕೇಂದ್ರಗಳು

■ **ಜಗನ್ನಾಥ ಆರ್.ದೇಸಾಯಿ** ರಾಯಚೂರು

ರಾಜ್ಯದಲ್ಲಿ ಈಗಾಗಲೇ ಬಿರುಬಿಸಿಲಿನ ಪ್ರತಾಪ ಶುರುವಾಗಿದ್ದು, ವಿದ್ಯುತ್ ಬಳಕೆ ದಿಢೀರ್ ಹೆಚ್ಚಳವಾಗಿದೆ. ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಕೇಂದ್ರಗಳ ಮೇಲೆ ಒತ್ತಡ ಹೆಚ್ಚಿದ್ದು, ಬೇಸಿಗೆ ವೇಳೆ ವಿದ್ಯುತ್ ಕ್ಷಾಮ ಎದುರಿಸುವ ಭೀತಿ ಕಾಡುತ್ತಿದೆ.

ಮುಂದಿನ ಮಳೆಗಾಲದವರೆಗೆ ವಿದ್ಯುತ್ ಬೇಡಿಕೆ ಸರಿದೂಗಿಸುವುದು ರಾಜ್ಯ ಸರಕಾರಕ್ಕೆ ಸವಾಲಾಗಿದೆ. ಬೇಸಿಗೆ ಆರಂಭದಲ್ಲಿಯೇ ರಾಜ್ಯದ ಹೈ.ಕ. ಪ್ರದೇಶ ಸೇರಿ ಬಹುತೇಕ ಕಡೆ ತಾಪಮಾನ ಏರುಗತಿಯಲ್ಲಿದೆ. ಮಳೆಯ ಅಭಾವದಿಂದ ಜಲವಿದ್ಯುದಾಗಾರಗಳಲ್ಲಿ ನೀರು ತಳಕಚ್ಚಿದ್ದು, ಶಾಖೋತ್ಪನ್ನ ಘಟಕಗಳನ್ನೇ ನೆಚ್ಚುವಂತಾಗಿದೆ.

**ಅವಧಿ ಪೂರ್ವ ಬಿರುಬೇಸಿಗೆ:** ಪ್ರತಿ ವರ್ಷ ಮಾರ್ಚ್ ಅಂತ್ಯ ಹಾಗೂ ಮೇ ವೇಳೆ ತಾಪಮಾನ ಹೆಚ್ಚಳವಾಗುತ್ತಿತ್ತು. ಈ ಅವಧಿಯಲ್ಲಿ ಸರಾಸರಿ ತಾಪಮಾನ 37 ರಿಂದ 42 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುತ್ತಿತ್ತು. ಆ ಹೊತ್ತಿಗೆ ಸರಕಾರವೂ ಪರಿಸ್ಥಿತಿ ನಿರ್ವಹಣೆಗೆ ಸಿದ್ಧತೆ ಮಾಡಿಕೊಳ್ಳುವುದು ರೂಢಿ. ಆದರೆ, ಕಳೆದ 2ವರ್ಷಗಳಿಂದ ಮಳೆ ಅಭಾವ ಹಿನ್ನೆಲೆಯಲ್ಲಿ ಫೆಬ್ರವರಿ ಕೊನೆಯ ವಾರದಿಂದಲೇ ಈ ಬಾರಿ ಅವಧಿ ಪೂರ್ವ ಬಿರುಬೇಸಿಗೆ ಅನುಭವಿಸುವಂತಾಗಿದೆ. ಹೈ.ಕ.ಸೇರಿ ರಾಜ್ಯದ ನಾನಾ ಕಡೆ ಸದ್ಯದ ತಾಪಮಾನ 35 ರಿಂದ 38 ಡಿಗ್ರಿ ಸೆಲ್ಸಿಯಸ್ ತಲುಪಿದೆ.

> **ಪ್ರಸಕ್ತ ವರ್ಷ ನಿರೀಕ್ಷೆಗೂ ಮುನ್ನವೇ ವಿದ್ಯುತ್ ಬಳಕೆ ಪ್ರಮಾಣ ಹೆಚ್ಚಳ ಕಂಡಿದೆ. ಅದೊಂದು ಸಾರ್ವಕಾಲಿಕ ದಾಖಲೆಯ ಬೇಡಿಕೆಯಾಗಿದೆ. ಭವಿಷ್ಯದಲ್ಲಿ ಉಂಟಾಗುವ ಬೇಡಿಕೆಯ ವಿದ್ಯುತ್ ಒದಗಿಸಲು ಕೆಪಿಸಿ ಸಿದ್ಧತೆ ನಡೆಸಿದೆ.**
>
> **-ಕುಮಾರ್‌ನಾಯಕ್,**
> ಎಂ.ಡಿ., ಕೆಪಿಸಿ, ಬೆಂಗಳೂರು

**ಸಾರ್ವಕಾಲಿಕ ಬೇಡಿಕೆ:** ಬಿಸಿಲ ತಾಪ ಹೆಚ್ಚಳವು ಈ ಬಾರಿ ಸಾರ್ವಕಾಲಿಕ ಬೇಡಿಕೆ ಹೆಚ್ಚಳಕ್ಕೆ ರಾಜ್ಯ ಸಾಕ್ಷಿಯಾಗಿದೆ. ಕಳೆದ ವರ್ಷ ಬೇಸಿಗೆಯಲ್ಲಿ ಅತೀ ಹೆಚ್ಚು ವಿದ್ಯುತ್ ಬೇಡಿಕೆ 9,200 ಮೆಗಾ ವ್ಯಾಟ್ ಆಗಿತ್ತು. ಆದರೆ, ಪ್ರಸಕ್ತ ವರ್ಷ ಫೆ. 25ರಂದು ದಿನದ ಅತೀ ಹೆಚ್ಚು ವಿದ್ಯುತ್ ಬೇಡಿಕೆ ಪ್ರಮಾಣ 10,200 ಮೆಗಾ ವ್ಯಾಟ್ ತಲುಪಿದ್ದು ಈವರೆಗಿನ ಸಾರ್ವಕಾಲಿಕ ದಾಖಲೆಯ ಬೇಡಿಕೆಯಿದಾಗಿದೆ.

ಮಾರ್ಚ್ ಮೊದಲ ವಾರದಲ್ಲಿಯೇ ಸರಾಸರಿ ವಿದ್ಯುತ್ ಬಳಕೆ ಪ್ರಮಾಣವು 9200 ಮೆಗಾ ವ್ಯಾಟ್ ನಷ್ಟಿದೆ. ಇದು ಸರಕಾರವನ್ನು ನಿದ್ದೆಗೆಡಿಸಿದ್ದು, ಕೆಪಿಸಿ ಹೆಚ್ಚಿನ ಒತ್ತಡದಲ್ಲಿದೆ. ರಾಜ್ಯದ ಜಲವಿದ್ಯುದಾಗಾರಗಳಲ್ಲಿ ಉತ್ಪಾದನೆ ಕುಸಿದಿದೆ. ರಾಜ್ಯದ ಶರಾವತಿಯಲ್ಲಿ 1035 ಮೆಗಾ ವ್ಯಾಟ್‌ಗೆ 755ಮೆಗಾ ವ್ಯಾಟ್, ಗೇರುಸೊಪ್ಪಾದಲ್ಲಿ 240 ಮೆಗಾ ವ್ಯಾಟ್‌ಗೆ 112 ಮೆಗಾ ವ್ಯಾಟ್ ಹಾಗೂ ಸೂಪಾದಲ್ಲಿ 100 ಮೆಗಾ ವ್ಯಾಟ್‌ಗೆ 93 ಮೆಗಾ ವ್ಯಾಟ್ ವಿದ್ಯುತ್ ದೊರೆಯುತ್ತಿದೆ.

ಇನ್ನುಳಿದಂತೆ ಪ್ರಮುಖ ವಿದ್ಯುತ್ ಕೇಂದ್ರಗಳಾದ ಜೋಗ, ಕದ್ರಾ, ಕೊಡಸಳ್ಳಿ, ಮಾಣಿ, ಭದ್ರಾ, ಶಿಂಷಾ, ಘಟಪ್ರಭಾ ಇತರೆಡೆ ನೀರಿಲ್ಲದ್ದರಿಂದ ವಿದ್ಯುತ್ ಉತ್ಪಾದನೆಯೇ ಸ್ಥಗಿತಗೊಂಡಿದೆ. ರಾಜ್ಯದಲ್ಲಿ ಗುರುವಾರ ಒಟ್ಟು 9200ಮೆಗಾ ವ್ಯಾಟ್ ವಿದ್ಯುತ್ ಬೇಡಿಕೆಯಿತ್ತು. ಶಾಖೋತ್ಪನ್ನ ಹಾಗೂ ಕೆಲ ಜಲವಿದ್ಯುತ್ ಕೇಂದ್ರಗಳಿಂದ ಒಟ್ಟು 5114 ಮೆಗಾ ವ್ಯಾಟ್ ಉತ್ಪಾದನೆಯಾದರೆ ಇತರ ಮೂಲಗಳಿಂದ ಒಟ್ಟು 4184 ಮೆಗಾ ವ್ಯಾಟ್ ಲಭ್ಯವಾಗುತ್ತಿತ್ತು.

**ಶಾಖೋತ್ಪನ್ನ ಘಟಕಗಳ ಸ್ಥಿತಿಗತಿ:** ಕಳೆದ ಆರು ತಿಂಗಳಿಂದಲೂ ಶಾಖೋತ್ಪನ್ನ ಘಟಕಗಳು ಸತತ ವಿದ್ಯುತ್ ಉತ್ಪಾದನೆ ಒತ್ತಡದಲ್ಲಿವೆ. ಶಕ್ತಿನಗರದ ಆರ್‌ಟಿಪಿಎಸ್‌ನ 1ನೇ ಘಟಕ ವಾರ್ಷಿಕ ನಿರ್ವಹಣೆಯಲ್ಲಿದ್ದು, 1300 ಮೆಗಾ ವ್ಯಾಟ್ ಉತ್ಪಾದಿಸಲಾಗುತ್ತಿದೆ. ಬಿಟಿಪಿಎಸ್‌ನ ಮೂರನೇ ಘಟಕಕ್ಕೆ ನೀರಿಲ್ಲದೇ, 2ನೇ ಘಟಕ ತಾಂತ್ರಿಕ ಸಮಸ್ಯೆಯಿಂದ ಸ್ಥಗಿತವಾಗಿದೆ. ತಾಪಮಾನ ಹೆಚ್ಚಿದಂತೆ ಮತ್ತಷ್ಟು ವಿದ್ಯುತ್ ಕೊರತೆ ನಿಶ್ಚಿತ. ಅಭಾವದ ಬಿಸಿ ಎದುರಿಸಲು ರಾಜ್ಯದ ಜನತೆ ಅವಧಿಗೂ ಮುನ್ನವೇ ಸಜ್ಜಾಗಬೇಕಿದೆ.

---

ತಾತ್ಕಾಲಿಕವಾಗಿ ನಿಲುಗಡೆಯಾಗಲಿದೆ

29-04, 03/03/17, Samyukta Kar

# ಇಂದು-ನಾಳೆ ವಿದ್ಯುತ್ ವ್ಯತ್ಯಯ

**ದೇವನಹಳ್ಳಿ (ವಿಜಯಪುರ):** ವಿಜಯಪುರ ಪಟ್ಟಣ ಮತ್ತು ಹೋಬಳಿ ಹಾಗೂ ಚನ್ನರಾಯಪಟ್ಟಣ ಹೋಬಳಿಗಳಲ್ಲಿನ ಕೆಲವು ಭಾಗಗಳಲ್ಲಿ ಮಾ.3 ಹಾಗೂ 4ರಂದು ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿಜಯಪುರ ಬೆಸ್ಕಾಂ ಇಲಾಖೆಯ ಜೆ.ಇ. ಮಂಜುನಾಥ ತಿಳಿಸಿದ್ದಾರೆ.

ವಿಜಯಪುರ 66/11 ಕೆ.ವಿ.ವ್ಯಾಪ್ತಿಯಲ್ಲಿ ಹೆಚ್ಚುವರಿ ಪರಿವರ್ತಕಗಳನ್ನು ನಿಯೋಜಿಸ ಲಾಗುತ್ತಿದೆ. ಇದರ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿಜಯಪುರ ಹೋಬಳಿ ವ್ಯಾಪ್ತಿಯ ವಿಜಯಪುರ ಟೌನ್, ನಿಂಬೆಕಾಯಿಪುರ, ವೆಂಕಟಗಿರಿಕೋಟೆ, ದಾಸರಹಳ್ಳಿ, ಗೊಡ್ಲುಮುದ್ದೇನಹಳ್ಳಿ, ಬಿಜ್ಜವಾರ, ಹುರುಳುಗುರ್ಕಿ, ಮುದುಗುರ್ಕಿ, ಧರ್ಮಪುರ, ಯಲುವಹಳ್ಳಿ, ನಾರಾಯಣಪುರ, ಸಿದ್ದನಹಳ್ಳಿ, ಚಂದೇನಹಳ್ಳಿ, ಚನ್ನರಾಯಪಟ್ಟಣ ಹೋಬಳಿಯ ಪಾಪನಹಳ್ಳಿ, ವರದೇನಹಳ್ಳಿ, ದಿನ್ನೂರು, ಚನ್ನರಾಯಪಟ್ಟಣ ಹೋಬಳಿ, ಬೀಡಿಗಾನಹಳ್ಳಿ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

# ಸ್ಟೀಲ್ ಬ್ರಿಡ್ಜ್ ಆಯ್ತು, ಈಗ ಸೌರ ಹಗರಣದ ಆರೋಪ

## ರಾಜಕಾರಣಿಗಳಿಗೆ ಯೋಜನೆ ಘಟಕ ಹಂಚಿಕೆ

**ಬೆಂಗಳೂರು:** ಸೌರ ವಿದ್ಯುತ್ ಯೋಜನೆ ಹಂಚಿಕೆಯಲ್ಲಿ ದೊಡ್ಡ ಅವ್ಯವಹಾರವಾಗಿದ್ದು, ಪ್ರಭಾವಿ ವ್ಯಕ್ತಿಗಳು ಹಾಗೂ ರಾಜಕಾರಣಿಗಳಿಗೆ ಯೋಜನೆಯ ಘಟಕಗಳನ್ನು ಹಂಚಿಕೆ ಮಾಡಲಾಗಿದೆ. ಈ ಕುರಿತು ಸಿಬಿಐ ತನಿಖೆಯೂ ಸೇರಿದಂತೆ ಒಟ್ಟು ಅವ್ಯವಹಾರದ ಸಮಗ್ರ ತನಿಖೆ ನಡೆಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಜಂಟಿ ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ವಕ್ತಾರ ಎಸ್.ಸುರೇಶ್‌ಕುಮಾರ್ ಮತ್ತು ಶಾಸಕ ಸಿ.ಟಿ.ರವಿ, ಪ್ರಕರಣದಲ್ಲಿ ಸಚಿವರ ಪಾತ್ರವೂ ಇದೆ ಎಂದು ಆರೋಪಿಸಿದರು. 300 ಮೆ.ವ್ಯಾ. ಸೌರವಿದ್ಯುತ್ ಉತ್ಪಾದನೆ ಯೋಜನೆಯಲ್ಲಿ ಘಟಕಗಳ ಗುತ್ತಿಗೆಯನ್ನು ಹಂಚಿಕೆ ಮಾಡುವಾಗ ದೊಡ್ಡ ಹಗರಣವೇ ನಡೆದಿದೆ. ಪಕ್ಷವೊಂದರ ಮುಖಂಡರೊಬ್ಬರ ಕುಟುಂಬವೊಂದಕ್ಕೆ 15 ಮೆ.ವ್ಯಾ. ನೀಡಲಾಗಿದ್ದು, ಈ ಕುರಿತು ತನಿಖೆ ನಡೆಯಬೇಕಿದೆ. ಈ ಹಂಚಿಕೆಯಲ್ಲಿ ಸಚಿವರೂ ಶಾಮೀಲಾಗಿರುವ ಶಂಕೆ ಇದ್ದು, ಸಿಬಿಐ ತನಿಖೆ ನಡೆಸಿದರೆ ಯಾರ‍್ಯಾರು ಪಾಲುದಾರರಾಗಿದ್ದಾರೆಂಬುದರ ಸತ್ಯ ಹೊರಬರಲಿದೆ. ಈ ಕುಟುಂಬ ಸಲ್ಲಿಸಿರುವ 10 ಅರ್ಜಿಗಳು ಕೇವಲ 10 ನಿಮಿಷಗಳ ಅಂತರದಲ್ಲಿ ಅಪ್‌ಲೋಡ್ ಆಗಿದ್ದು, ಎಲ್ಲ ಹತ್ತೂ ಅರ್ಜಿಗಳೂ ಅಂಗೀಕೃತವಾಗಿವೆ. ಅರ್ಜಿ ಸಲ್ಲಿಸುವ ವಾರವೊಂದರ ಮೊದಲಷ್ಟೇ ಭೂಮಿ ಖರೀದಿಸಲಾಗಿದೆ ಎಂದರು.

# ಸೌರ ವಿದ್ಯುತ್ ಅವ್ಯವಹಾರದಲ್ಲಿ ಹೆಬ್ಬಾಳ್ಕರ್ ಕುಟುಂಬ

## ■ 1.69 ಕೋಟಿ ರೂ. ಆಧಾರಕ್ಕೆ 215 ಕೋಟಿ ಸಾಲ ಕೊಟ್ಟಿದ್ದು ಹೇಗೆ: ಸಿ.ಟಿ.ರವಿ ಪ್ರಶ್ನೆ

**ಬೆಂಗಳೂರು:** ರೈತರಿಗಾಗಿ ರೂಪಿಸಿದ್ದ ಸೌರ ವಿದ್ಯುತ್ ಉತ್ಪಾದನೆ ಯೋಜನೆ ಹೆಸರಿನಲ್ಲಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀ ಹೆಬ್ಬಾಳ್ಕರ್ ಕುಟುಂಬದವರು ಅಕ್ರಮ ಎಸಗಿದ್ದು ಈ ಕುರಿತು ತನಿಖೆ ನಡೆಸಬೇಕು ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ಸಿ.ಟಿ.ರವಿ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಕ್ಷ್ಮೀ ಹೆಬ್ಬಾಳ್ಕರ್ ಅವರ ಕುಟುಂಬ ಸರ್ಕಾರದ ಪ್ರಭಾವ ಬಳಸಿ ಸೌರ ವಿದ್ಯುತ್ ಉತ್ಪಾದನೆಯ 10 ಯೋಜನೆ ಪಡೆದಿದೆ. ಸೌರ ವಿದ್ಯುತ್ ಉತ್ಪಾದನೆ ಯೋಜನೆಯಡಿ ರೈತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಲಕ್ಷ್ಮೀ ಹೆಬ್ಬಾಳ್ಕರ್ ಅವರ ಸಹೋದರ ಕೇವಲ 59 ಸೆಕೆಂಡ್‌ಗಳಲ್ಲಿ 10 ಅರ್ಜಿಗಳನ್ನು ಅಪ್‌ಲೋಡ್ ಮಾಡಿದ್ದರು. ಆ ಹತ್ತೂ ಅರ್ಜಿಗಳನ್ನು ಮಾನ್ಯ ಮಾಡಿರುವ ಕ್ರೆಡಲ್, 15 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಅನುಮತಿ ನೀಡಿತ್ತು. ಅರ್ಜಿ ಸಲ್ಲಿಸುವಲ್ಲಿ ಎಷ್ಟೇ ನಿಪುಣನಿರಲಿ, ಸಾಮಾನ್ಯವಾಗಿ ಒಂದು ಅರ್ಜಿ ಸಲ್ಲಿಸಲು ಕನಿಷ್ಠ 2 ನಿಮಿಷ ಬೇಕಾಗುತ್ತದೆ. ಆದರೆ, 59 ಸೆಕೆಂಡ್‌ಗಳಲ್ಲಿ 10 ಅರ್ಜಿ ಸಲ್ಲಿಸಲು ಹೇಗೆ ಸಾಧ್ಯ? ಇದರಲ್ಲಿ ಸರ್ಕಾರ ಎನ್ ಐಸಿಯನ್ನು ದುರುಪಯೋಗ ಪಡಿಸಿಕೊಂಡು ತಮಗೆ ಬೇಕಾದವರಿಗೆ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಗಳನ್ನು ಮಂಜೂರು ಮಾಡಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಆರೋಪಿಸಿದರು.

ಈ ಎಲ್ಲಾ 10 ಅರ್ಜಿ ಸಲ್ಲಿಸಲು ಒಂದು ವಾರ ಮುಂಚೆಯಷ್ಟೇ ಸಂಬಂಧಿಸಿದ ಭೂಮಿ ಖರೀದಿಸಲಾಗಿತ್ತು. ಆದರೆ, ಆ ಭೂಮಿಯ ಖಾತೆ ಬದಲಾವಣೆಗೆ ಮುನ್ನವೇ ಮಾರಾಟ ಕ್ರಯಪತ್ರ ಆಧರಿಸಿ ಅರ್ಜಿ ಪರಿಗಣಿಸಲಾಗಿದೆ ಎಂದು ದೂರಿದರು.

### ಕೆಪಿಎಸ್‌ಸಿ ಮಾಜಿ ಸದಸ್ಯರ ಕ್ಷಮೆಯಾಚಿಸಲಿ

**ಬೆಂಗಳೂರು:** ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೆಪಿಎಸ್‌ಸಿಗೆ ನೇಮಕಗೊಂಡಿದ್ದ ಸದಸ್ಯರನ್ನು ಪದಚ್ಯುತಿಗೊಳಿಸಲು ಸರ್ಕಾರ 2011ರ 362 ಅಭ್ಯರ್ಥಿಗಳ ನೇಮಕಾತಿ ಆದೇಶ ರದ್ದುಗೊಳಿಸಿತ್ತು ಎಂದು ಸಿ.ಟಿ.ರವಿ ಆರೋಪಿಸಿದ್ದಾರೆ.

ಕೆಎಟಿ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸದ ಕಾರಣ ಅಕ್ರಮನಡೆದಿಲ್ಲಎಂದುಸರ್ಕಾರವೇಹೇಳಿದಂತಾಗಿದೆ. ಇದರಿಂದಾಗಿ ಈ ಹಿಂದೆ ಅಕ್ರಮ ನಡೆದಿದ್ದು ಅದರಲ್ಲಿ ಕೆಪಿಎಸ್‌ಸಿ ಸದಸ್ಯರು ಶಾಮೀಲಾಗಿದ್ದಾರೆ ಎಂದು ಹೇಳಿ ಸದಸ್ಯರನ್ನು ಅಮಾನತುಗೊಳಿಸುವ ಮೂಲಕ ಅವರಿಗೆ ಅವಮಾನ ಮಾಡಿದಂತಾಗಿದೆ. ಆದ್ದರಿಂದ ಅಮಾನತುಗೊಳಿಸಿದ ಸದಸ್ಯರು ಮತ್ತು ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಬಹಿರಂಗ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಇನ್ನೊಂದೆಡೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಸಕ್ಕರೆ ಕಾರ್ಖಾನೆಗಾಗಿ ಕೇವಲ 1.69 ಕೋಟಿ ರೂ. ಮೊತ್ತದ ಭದ್ರತೆಗೆ ಅಪೆಕ್ಸ್ ಬ್ಯಾಂಕ್‌ನಿಂದ 215 ಕೋಟಿ ರೂ. ಸಾಲ ನೀಡಲಾಗಿದೆ. ಅವರು ಕೇವಲ 5 ಲಕ್ಷ ರೂ. ಆದಾಯ ಹೊಂದಿದ್ದು ಅಂಥವರಿಗೆ ಇಷ್ಟು ಮೊತ್ತದ ಸಾಲ ನೀಡಲು ಹೇಗೆ ಸಾಧ್ಯ? ಅದೂ ನಬಾರ್ಡ್ ಅನುಮತಿ ಇಲ್ಲದೆ ಈ ಸಾಲ ನೀಡಲಾಗಿದೆ ಎಂದು ಆರೋಪಿಸಿದರು.

### 5 ಲಕ್ಷ ರೂ. ಆದಾಯ: ಇಂಡೋನೇಷಿಯಾದಲ್ಲಿ ಗಣಿ ಪಾಲುದಾರ

ಕೇವಲ 5 ಲಕ್ಷ ರೂ. ಆದಾಯ ಹೊಂದಿರುವ ರಾಜ್ಯದ ಕುಟುಂಬವೊಂದು ಇಂಡೋನೇಷಿಯಾದಲ್ಲಿ 5000 ಕೋಟಿ ರೂ. ಮೌಲ್ಯದ ಕಲ್ಲಿದ್ದಲು ಗಣಿಯ ಪಾಲುದಾರರಾಗಿದ್ದು, ಇದರ ಹಿಂದೆ ಪ್ರಭಾವಿ ಸಚಿವರೊಬ್ಬರ ಕೈವಾಡ ಇದೆ. ಈ ಕಂಪನಿಯಿಂದ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ)ಗೆ ಕಲ್ಲಿದ್ದಲು ಸರಬರಾಜು ಮಾಡಲಾಗಿದೆ ಎಂದೂ ಸಿ.ಟಿ.ರವಿ ಆರೋಪಿಸಿದ್ದಾರೆ.

ಬೇನಾಮಿ ವ್ಯವಹಾರದ ಹಿಂದೆ ಕಾಂಗ್ರೆಸ್‌ನ ಹೈಕಮಾಂಡ್ ಅಥವಾ ಕೈ ಕಮಾಂಡ್ ಇರುವ ಅನುಮಾನವಿದೆ. ಕೇವಲ 5 ಲಕ್ಷ ರೂ. ಆದಾಯ ಹೊಂದಿರುವವರು 5000 ಕೋಟಿ ರೂ. ಮೌಲ್ಯದ ಕಲ್ಲಿದ್ದಲು ಗಣಿಯ ಪಾಲುದಾರರಾಗಲು ಹೇಗೆ ಸಾಧ್ಯ? ಈ ಪಾಲುದಾರಿಕೆಯ ನಿಜವಾದ ಮಾಲೀಕರು ಯಾರು ಎಂಬ ಬಗ್ಗೆ ತನಿಖೆಯಾಗಬೇಕಿದೆ. ಈ ಕುರಿತು ತನಿಖೆಗೆ ಆಗ್ರಹಿಸಿ ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆಯಲಾಗುವುದು. ಈ ಹಗರಣದ ಬಗ್ಗೆ ನಾವು ಮಾಹಿತಿ ಸಂಗ್ರಹಿಸುತ್ತಿದ್ದು, ಅದು ಸಿಕ್ಕಿದ ಬಳಿಕ ಸಚಿವರ ಹೆಸರನ್ನು ಬಹಿರಂಗಗೊಳಿಸುವುದಾಗಿ ಹೇಳಿದರು.

---

# ವಿದ್ಯುತ್ ತಂತಿ ತಗುಲಿ ಲೈನ್‌ಮನ್ ಮೃತ್ಯು

**ಪುತ್ತೂರು:** ತಾಲೂಕಿನ ಸರ್ವೆ ಗ್ರಾಮದ ಸೊರಕೆ ಪರಂಟೋ ಲುವಿನಲ್ಲಿ ವಿದ್ಯುತ್ ಕಂಬದಲ್ಲಿ ದುರಸ್ತಿ ಮಾಡುವಾಗ ಎಚ್‌ಟಿ ಲೈನ್ ತಗುಲಿ ಲೈನ್‌ಮನ್ ಮೃತಪಟ್ಟ ಘಟನೆ ಗುರುವಾರ ನಡೆದಿದೆ. ಸವಣೂರು ಮೆಸ್ಕಾಂ ಉಪಕೇಂದ್ರ ದಲ್ಲಿ ತರಬೇತಿ ಅವಧಿಯ ಲೈನ್‌ಮನ್, ಬಾಗಲಕೋಟೆಯ ಶ್ರೀಶೈಲ (28) ಮೃತ ದುರ್ದೈವಿ. ಗುರುವಾರ ಮಧ್ಯಾಹ್ನ ವಿದ್ಯುತ್ ಕಂಬದಲ್ಲಿ ದುರಸ್ತಿ ನಿರತರಾಗಿದ್ದ ವೇಳೆ, ಕಂಬದ ಮೇಲ್ಭಾಗದಲ್ಲಿ ಹಾದು ಹೋಗಿದ್ದ ಎಚ್‌ಟಿ ಲೈನ್ ತಗುಲಿದ್ದು ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ಶ್ರೀಶೈಲ ತರಬೇತಿ ಅವಧಿ ಹಿನ್ನೆಲೆ ಮೆಸ್ಕಾಂ ಸವಣೂರು ಉಪಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ತರಬೇತಿ ಅವಧಿ ಸಂದರ್ಭದಲ್ಲಿ ಯಾವುದೇ ವಿಮೆ ಸೌಲಭ್ಯಗಳಿಲ್ಲದ ಕಾರಣ, ವಿದ್ಯುತ್ ಕಂಬಕ್ಕೆ ಹತ್ತಿಸುವಂತಿಲ್ಲದಿದ್ದರೂ, ನುರಿತ ಲೈನ್‌ಮನ್‌ಗಳ ಕೊರತೆಯಿಂದ ಶ್ರೀ ಶೈಲರನ್ನು ಕಂಬಕ್ಕೆ ಹತ್ತಿಸಿರುವ ಸಾಧ್ಯತೆ ಇದೆ ಎನ್ನಲಾಗಿದೆ. ದ.ಕ. ಜಿಲ್ಲಾ ವ್ಯಾಪ್ತಿಯಲ್ಲಿ ತರಬೇತಿ ಅವಧಿಯಲ್ಲಿ ಸಾವನ್ನಪ್ಪಿದ 3ನೇ ಪ್ರಕರಣ ಇದಾಗಿದೆ. ಮೆಸ್ಕಾಂ ಮುಂಜಾಗ್ರತೆ ಕ್ರಮ ಕೈಗೊಳ್ಳದ ಕಾರಣ ಲೈನ್ ಮನ್ ಸಾವನ್ನಪ್ಪಿದ್ದಾರೆಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

---

■ ಸುದರ್ಶನ ಚಾಳನಾಯ್ಕ, ತಾ:ಚಿಕ್ಕೋಡಿ.

03/03/17, Samyuktha Karnataka

# ವಿದ್ಯುತ್ ಕ್ಷಾಮ ಮುಂಜಾಗ್ರತೆ ಅಗತ್ಯ

ಕಳೆದೆರಡು ವರ್ಷ ಮಳೆಯ ಅಭಾವದಿಂದ ಅತಿ ಕಡಿಮೆ ವೆಚ್ಚದಲ್ಲಿ ಹೆಚ್ಚು ವಿದ್ಯುತ್ ಉತ್ಪಾದಿಸುವ ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟ ಕೆಳಕ್ಕೆ ಇಳಿದಿದ್ದು ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸುವ ಮುನ್ಸೂಚನೆ ಕಂಡು ಬಂದಿದೆ. ಒಣ, ಹಸಿ, ಕಸಗಳಿಂದ ಜೈವಿಕ ಕೃಷಿ ತ್ಯಾಜ್ಯಗಳಿಂದ ತಂತ್ರಜ್ಞಾನ ಬಳಸಿ ವಿದ್ಯುತ್ ಉತ್ಪಾದಿಸುವ ಸಣ್ಣ ಸಣ್ಣ ಘಟಕಗಳನ್ನು ಸ್ಥಾಪನೆ ಮಾಡುವಲ್ಲಿ ಸರಕಾರ, ಜನಪ್ರತಿನಿಧಿಗಳು ಮುಂದಾದಲ್ಲಿ ಸ್ವಲ್ಪಮಟ್ಟಿಗಾದರೂ ವಿದ್ಯುತ್ ಕ್ಷಾಮ ನಿಯಂತ್ರಿಸಬಹುದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಲ ಕಾಲೇಜು ವಿದ್ಯಾರ್ಥಿಗಳು ಸೇರಿ "ಯುವಾ" ಎಂಬ ಸಂಸ್ಥೆ ರಚಿಸಿ ಆ ಮೂಲಕ ಸೌರಶಕ್ತಿ ದೀಪಗಳನ್ನು ಮನೆ ಮನೆಗೆ ಅಳವಡಿಸುವ ಮಹತ್ತರ ಕಾರ್ಯ ಕೈಗೊಂಡಿದ್ದು ಶ್ಲಾಘನೀಯವಾಗಿದೆ. ಮೊದಲ ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸುಮಾರು 21 ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡಿದೆ. ಹಂತ ಹಂತವಾಗಿ ರಾಜ್ಯಾದ್ಯಂತ ವಿಸ್ತರಿಸಿದಲ್ಲಿ ವಿದ್ಯುತ್ ಉತ್ಪಾದಿಸುವ ಬೃಹತ್ ಸಂಸ್ಥೆಯಾದ ಕೆಪಿಟಿಸಿಎಲ್ ಮೇಲಿನ ಒತ್ತಡ ಕಡಿಮೆ ಮಾಡಬಹುದು. "ಯುವಾ" ಸಂಸ್ಥೆಯ ಅಧ್ಯಕ್ಷ ಧರಂವೀರ ಅವರಿಗೆ ಸಲಾಂ ಸಲ್ಲಿಸೋಣ.

■ ಡಿ. ಮಾದನಶೆಟ್ಟಿ, ವಿಜಯಪುರ

Prabhakar
Vijay vani
page-50

# ನೀರು ಸಮಸ್ಯೆಗೆ ಮಿತ ಬಳಕೆ ಪರಿಹಾರ

## ಕೆಲವೆಡೆ ವಾರಕ್ಕೊಮ್ಮೆಯೂ ಪೂರೈಸುತ್ತಿಲ್ಲ | ಸಭೆಯಲ್ಲಿ ಜನಪ್ರತಿನಿಧಿಗಳ ಆಕ್ರೋಶ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಬೆಂಗಳೂರಿಗರು ಮಿತವಾಗಿ ನೀರು ಬಳಸಿದರೆ ಮೇ ಅಂತ್ಯದ ವರೆಗೆ ಕೊರತೆಯಾಗುವುದಿಲ್ಲ ಎಂದು ಸರ್ಕಾರ ಭರವಸೆ ನೀಡಿದೆ. ಆದರೆ, ಶಾಸಕರ ಆಗ್ರಹದ ಮಧ್ಯೆಯೂ ಕೊಳವೆಬಾವಿ ನೀರನ್ನು ಟ್ಯಾಂಕರ್‌ನಲ್ಲಿ ಸರಬರಾಜು ಮಾಡುತ್ತಿರುವ ಖಾಸಗಿ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮಕ್ಕೆ ಹಿಂದೇಟು ಹಾಕಿದೆ.

ಹಾರಂಗಿ, ಹೇಮಾವತಿ, ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಲ್ಲಿ 11.75 ಟಿಎಂಸಿ ನೀರಿದ್ದು, ಕುಡಿಯುವ ನೀರಿಗೆ 9.50 ಟಿಎಂಸಿ ನೀರಿನ ಅಗತ್ಯವಿದೆ. ಜಲಮಂಡಳಿಯು 60 ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುತ್ತಿದೆ. 100 ಟ್ಯಾಂಕರ್‌ಗಳನ್ನು ಬಾಡಿಗೆ ಪಡೆಯಲು ಅಲ್ಪಾವಧಿ ಟೆಂಡರ್ ಕರೆಯಲಾಗುತ್ತಿದೆ. ಸದ್ಯಕ್ಕೆ ನೀರಿನ ಸಮಸ್ಯೆಯಿಲ್ಲ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

» **ಖಾಸಗಿ ಟ್ಯಾಂಕರ್‌ಗಳ ವಿರುದ್ಧ ಕ್ರಮಕ್ಕೆ ಸರ್ಕಾರ ಹಿಂದೇಟು**

ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ವಿಧಾನಸೌಧದಲ್ಲಿ ಗುರುವಾರ ನಡೆದ ಸಭೆಯಲ್ಲಿ ಚರ್ಚೆಯಾಯಿತು. ಆದರೆ, ಬಹುತೇಕ ಶಾಸಕರು ಸರ್ಕಾರದ ವಿವರಣೆಗೆ ತದ್ವಿರುದ್ಧವಾಗಿ ಮಾತನಾಡಿದರು. ಅಧಿಕಾರಿಗಳು ಮಾಹಿತಿಯನ್ನು ಚೆಂದವಾಗಿ ಪ್ರಕಟಿಸಿದ್ದಾರೆ. ವಾಸ್ತವ ಸ್ಥಿತಿ ಕೆಟ್ಟದಾಗಿದೆ. ನಗರದ ಹೊರವಲಯದ ಹಳ್ಳಿಗಳಿಗೆ ವಾರಕ್ಕೊಮ್ಮೆಯೂ ಕುಡಿಯುವ ನೀರು ಬಿಡುತ್ತಿಲ್ಲ. ಕೇಂದ್ರ ಭಾಗದ ಕೆಲ ಪ್ರದೇಶಗಳಿಗೂ ಸಮರ್ಪಕ ನೀರು ದೊರೆಯುತ್ತಿಲ್ಲ ಎಂದು ಪಕ್ಷಾತೀತವಾಗಿ ಆರೋಪಿಸಿದರು.

ಇದಕ್ಕೆ ಪೂರಕವಾಗಿ ಅಧಿಕಾರಿಗಳನ್ನು ಜಾರ್ಜ್ ತರಾಟೆ ತೆಗೆದುಕೊಂಡರು. ಅಧಿಕಾರಿಗಳು ಸುಳ್ಳು ಮಾಹಿತಿ ನೀಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿಯೇ ಎಲ್ಲ ಕೊಳವೆಬಾವಿಗಳನ್ನು ದುರಸ್ತಿ ಮಾಡಲಾಗಿದೆ ಎಂದು ತಿಳಿಸಿದ್ದರು. ಆದರೆ, ಕ್ಷೇತ್ರ ಪರ್ಯಟನೆ ಮಾಡಿದಾಗ ಬಹುತೇಕ ಕೊಳವೆ ಬಾವಿಗಳು ಕೆಟ್ಟಿರುವುದು ಗಮನಕ್ಕೆ ಬಂದವು. ದುರಸ್ತಿ ಮಾಡುವವರ ದೂರವಾಣಿ ಸಂಖ್ಯೆ, ಸ್ಥಳೀಯ ಇಂಜಿನಿಯರ್‌ಗಳ ವಿವರ ಹಾಗೂ ಸಂಪರ್ಕ ಸಂಖ್ಯೆಯನ್ನು ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು ಎಂದು ಎಚ್ಚರಿಸಿದರು.

ಸಾರ್ವಜನಿಕರಲ್ಲಿ ನೀರಿನ ಮಿತ ಬಳಕೆಗೆ ಜಾಗೃತಿ ಮೂಡಿಸಬೇಕಿದೆ. ಈ ಬಗ್ಗೆ ಸರ್ಕಾರ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಸಭೆಯಲ್ಲಿ ಹಾಜರಿದ್ದ ಬಹುತೇಕ ಜನಪ್ರತಿನಿಧಿಗಳು ಆಗ್ರಹಿಸಿದರು.

### ಮುನಿರತ್ನರಿಂದ ಪಾಠ ಕಲಿಯಬೇಕು

ಸರ್ಕಾರ ನೀಡುವ ಬಹುತೇಕ ಅನುದಾನಗಳು ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ಕ್ಷೇತ್ರಕ್ಕೆ ಹೋಗುತ್ತಿವೆ. ಅನುದಾನ ಹೇಗೆ ಸೆಳೆಯಬೇಕೆನ್ನುವುದನ್ನು ಅವರಿಂದ ಕಲಿಯಬೇಕಿದೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.



ವಿಧಾನಸೌಧದಲ್ಲಿ ಗುರುವಾರ ಆಯೋಜಿಸಿದ್ದ ಸಭೆಯಲ್ಲಿ ಬೆಂಗಳೂರಿನ ನೀರಿನ ಸಮಸ್ಯೆ ಕುರಿತು ಶಾಸಕ ಜಮೀರ್ ಅಹಮದ್ ಖಾನ್ ಮಾತನಾಡಿದರು.

### ಕುಡಿಯುವ ನೀರಿನ ಬಗ್ಗೆ [illegible]

ಕುಡಿಯುವ ನೀರಿನ ಸಮಸ್ಯೆ ಬಗ್ಗೆ [illegible] ಸೇತುವೆ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಕುಡಿಯುವ ನೀರಿನ ಬಗ್ಗೆ ಮಾತನಾಡಿ ಎಂದು ಆಡಳಿತ ಪಕ್ಷದ ರಾಜ್ಯಸಭೆ ಸದಸ್ಯ ರಾಜೀವ್ ಗೌಡ ಆಗ್ರಹಿಸಿದ್ದು ವಿಶೇಷವಾಗಿತ್ತು. ಸಭೆ ಆರಂಭದಲ್ಲಿಯೂ ಬಿಜೆಪಿ ಸದಸ್ಯರು ಇದೇ ಆಗ್ರಹ ಮಾಡಿದ್ದರು. ನೀರಿನ ಸಮಸ್ಯೆಗಿಂತ ಉಕ್ಕಿನ ಸೇತುವೆ ಬಗ್ಗೆ ಉತ್ತರಿಸಲೇ ಸರ್ಕಾರ ಸಿದ್ಧವಾಗಿ ಬಂದಂತಿತ್ತು. ಸಭೆಯಲ್ಲಿ ಹಾಜರಿದ್ದ ರಾಮಲಿಂಗಾ ರೆಡ್ಡಿ, ಕೃಷ್ಣ ಬೈರೇಗೌಡ, ಎಂ.ಆರ್. ಸೀತಾರಾಂ ಹಾಗೂ ಎಂ. ಕೃಷ್ಣಪ್ಪ ಅವರು ಉಕ್ಕಿನ ಸೇತುವೆ ವಿಚಾರಕ್ಕೆ ಸೀಮಿತರಾದರು. ಕುಡಿಯುವ ನೀರಿನ ಬಗ್ಗೆ ಮಾತನಾಡಲಿಲ್ಲ.

### ಪ್ರಮುಖ ನಿರ್ಧಾರಗಳು

- ಪ್ರತಿ ಶಾಸಕರಿಗೆ 5 ಕೊಳವೆಬಾವಿ ಕೊರೆಸಲು ಅನುಮತಿ
- ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚನೆ, ಕಾರ್ಪೊರೇಟರ್‌ಗಳು ಭಾಗಿ
- ನಿಯಮಬಾಹಿರವಾಗಿ ಅಧಿಕ ಹಣ ಪಡೆಯುವ ನೀರಿನ ಟ್ಯಾಂಕರ್‌ಗಳ ವಿರುದ್ಧ ಕ್ರಮ
- ಇಲಾಖೆ ವೆಬ್‌ಸೈಟ್‌ನಲ್ಲಿ ಕೊಳವೆಬಾವಿ ದುರಸ್ತಿ ಹಾಗೂ ಕುಡಿಯುವ ನೀರಿನ ಸಮಸ್ಯೆ ನೀಗಿಸುವ ಅಧಿಕಾರಿಗಳ ದೂರವಾಣಿ ಸಂಖ್ಯೆ ಪ್ರಕಟಿಸಲು ಸೂಚನೆ
- ನೀರು ಬಿಡುವ ಸಂದರ್ಭ ವಿದ್ಯುತ್ ಕಡಿತ ಮಾಡದಂತೆ ಬೆಸ್ಕಾಂ ಜತೆ ಚರ್ಚೆ
- ನೀರಿನ ಬಾಕಿ ಬಿಲ್ ಮನ್ನಾ ಬಗ್ಗೆ ಸಿಎಂ ಜತೆ ಚರ್ಚೆ
- 2021ರೊಳಗೆ ಎಲ್ಲ ಚರಂಡಿ ನೀರಿನ ಸಂಸ್ಕರಣೆ

### ಮಾಧ್ಯಮಗಳಿಗೆ ಪ್ರವೇಶ

ಕುಡಿಯುವ ನೀರಿನ ಸಭೆ ಹೆಸರಲ್ಲಿ ಉಕ್ಕಿನ ಸೇತುವೆ ಕುರಿತ ನಿರ್ಣಯ ಪ್ರಕಟಿಸಬೇಕಿದ್ದರಿಂದ ಇದೇ ಮೊದಲ ಬಾರಿಗೆ ಸಭೆಗೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ನೀಡಲಾಗಿತ್ತು.

# ಹೆಬ್ಬಾಳ್ಕರ ಕುಟುಂಬಕ್ಕೆ ಲಾಭ
# ಇ.ಡಿ ತನಿಖೆಗೆ ಬಿಜೆಪಿ ಆಗ್ರಹ

**ಬೆಂಗಳೂರು:** ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀ ಹೆಬ್ಬಾಳ್ಕರ ಪಾಲುದಾರಿಕೆಯ ಸಕ್ಕರೆ ಕಾರ್ಖಾನೆಗೆ ಸಹಕಾರಿ ಬ್ಯಾಂಕ್‌ಗಳಿಂದ ₹215 ಕೋಟಿ ಸಾಲ ಮಂಜೂರು ಹಾಗೂ ಅವರ ಕುಟುಂಬದವರಿಗೆ ಸೌರವಿದ್ಯುತ್ ಘಟಕ ಹಂಚಿಕೆ ಮಾಡಿರುವ ಬಗ್ಗೆ ಜಾರಿ ನಿರ್ದೇಶನಾಲಯದಿಂದ(ಇ.ಡಿ) ತನಿಖೆ ನಡೆಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಬೇನಾಮಿ ವಹಿವಾಟು ತಿದ್ದುಪಡಿ ಕಾಯ್ದೆ ಅಡಿ ಮೊಕದ್ದಮೆ ದಾಖಲಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಕೇಂದ್ರ ಗೃಹ ಸಚಿವ ರಾಜನಾಥ್‌ಸಿಂಗ್ ಅವರಿಗೆ ಪತ್ರ ಬರೆಯುವುದಾಗಿ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತು ವಕ್ತಾರ ಎಸ್. ಸುರೇಶಕುಮಾರ್ ಮಾಧ್ಯಮ ಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ತನಿಖೆ ನಡೆದರೆ ರಾಜ್ಯ ಸರ್ಕಾರದ ಪ್ರಭಾವಿ ಸಚಿವರ ಕೊರಳಿಗೆ ಹಗರಣ ಉರುಳಾಗಿ ಪರಿಣಮಿಸಲಿದೆ. ಹೆಬ್ಬಾಳ್ಕರ ಮತ್ತು ಕುಟುಂಬದವರಿಗೆ ಲಾಭ ಮಾಡಿಕೊಟ್ಟಿರುವ ಯೋಜನೆಗಳ ದಾಖಲೆಗಳನ್ನು ಬಿಜೆಪಿ ಸಂಗ್ರಹಿಸುತ್ತಿದೆ ಎಂದು ಅವರು ಹೇಳಿದರು.

ರೈತರ ಪಾಲುದಾರಿಕೆಯಡಿ ಸೌರ ವಿದ್ಯುತ್ ಉತ್ಪಾದಿಸುವ ಯೋಜನೆಗೆ ಫಲಾನುಭವಿಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡುವುದಾಗಿ ವಿಧಾನಸಭೆಯಲ್ಲಿ ಇಂಧನ ಸಚಿವರು ಹೇಳಿಕೆ ನೀಡಿದ್ದರು. ಆದರೆ, ರಾಷ್ಟ್ರೀಯ ಮಾಹಿತಿ ಕೇಂದ್ರವನ್ನು ದುರುಪಯೋಗ ಪಡಿಸಿಕೊಂಡ ಇಂಧನ ಇಲಾಖೆ, ರೈತರ ಹೆಸರಿನಲ್ಲಿ ತಮಗೆ ಬೇಕಾದವರಿಗೆ ಸೌರ ವಿದ್ಯುತ್ ಘಟಕ ಹಂಚಿಕೆ ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ ಎಂದು ರವಿ ಆಪಾದಿಸಿದರು.

## ‘ಕೆಪಿಎಸ್‌ಸಿ ಸದಸ್ಯರ ಮೇಲಿನ ಮೊಕದ್ದಮೆ ವಾಪಸ್ ಪಡೆಯಲಿ’

2011ರ ಗೆಜೆಟೆಡ್ ಪ್ರೊಬೆಷನರಿ ಆಯ್ಕೆಪಟ್ಟಿಯಲ್ಲಿ ಅಕ್ರಮ ನಡೆದಿಲ್ಲ ಎಂದು ಸರ್ಕಾರ ಒಪ್ಪಿಕೊಂಡಿರುವುದರಿಂದ ಕೆಪಿಎಸ್‌ಸಿ ಹಿಂದಿನ ಸದಸ್ಯರ ಮೇಲಿನ ಮೊಕದ್ದಮೆ ವಾಪಸ್ ಪಡೆಯಲಿ ಎಂದು ಸಿ.ಟಿ. ರವಿ ಒತ್ತಾಯಿಸಿದರು.

ಬಿಜೆಪಿ ಅವಧಿಯಲ್ಲಿ ನೇಮಕವಾಗಿದ್ದ ಕೆಪಿಎಸ್‌ಸಿ ಸದಸ್ಯರನ್ನು ಹದ[illegible], ತಮಗೆ ಬೇಕಾದವರನ್ನು ಸದಸ್ಯರಾಗಿ ನೇಮಕ ಮಾಡಿಕೊಳ್ಳುವ [illegible] 2011ರ [illegible] ಅಕ್ರಮ ನಡೆದಿದೆ ಎಂದು ಕಾಂಗ್ರೆಸ್ ಸರ್ಕಾರ ಷಡ್ಯಂತ್ರ ಹೆಣೆಯಿತು. ಕೆಪಿಎಸ್‌ಸಿ ಸದಸ್ಯರನ್ನು ಕಳಂಕಿತರೆಂದು ಬಿಂಬಿಸಲು [illegible] ಎಂದು ದೂರಿದರು.

## ■ ಬಿಟಿಪಿಎಸ್ ಎರಡನೇ ವಿದ್ಯುತ್ ಘಟಕ ಸ್ಥಗಿತ

**ಬಳ್ಳಾರಿ:** ರಾಜ್ಯದ ವಿದ್ಯುತ್‌ಗೆ ಬೇಡಿಕೆ ಕುಸಿದ ಹಿನ್ನೆಲೆ ತಾಲ್ಲೂಕಿನ ಕುಡತಿನಿ ಬಳಿಯ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಮಂಗಳವಾರದಿಂದ 500 ಮೆ.ವ್ಯಾ. ವಿದ್ಯುತ್ ಉತ್ಪಾದಿಸುವ ಬಿಟಿಪಿಎಸ್ ಎರಡನೇ ಘಟಕ ಸ್ಥಗಿತಗೊಳಿಸಲಾಗಿದೆ. ರಾಯಚೂರು ಬಳಿಯ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 800 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಆರಂಭದ ನಂತರ ವಿದ್ಯುತ್ ನಿಗಮದ ನಿರ್ದೇಶನದ ಮೇರೆಗೆ ಎರಡನೇ ಘಟಕ ಸ್ಥಗಿತಗೊಳಿಸಲಾಗಿದೆ ಎಂದು ಬಿಟಿಪಿಎಸ್ ಇಡಿ ಮೃತ್ಯುಂಜಯ ತಿಳಿಸಿದರು.

## ಇಂಧನ ಇಲಾಖೆಯಲ್ಲಿ ಗೋಲ್‌ಮಾಲ್: ಬಿಜೆಪಿ ಆರೋಪ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆಪಿಟಿಸಿಎಲ್‌ಗೆ ಕಲ್ಲಿದ್ದಲು ಖರೀದಿ ಹಾಗೂ ಸೌರ ವಿದ್ಯುತ್ ಘಟಕಗಳ ಹಂಚಿಕೆಯಲ್ಲಿ ಗೋಲ್‌ಮಾಲ್ ನಡೆದಿದೆ ಎಂದು ರಾಜ್ಯ ಬಿಜೆಪಿ ಮತ್ತೊಂದು ಗಂಭೀರ ಆರೋಪ ಮಾಡಿದೆ.

''ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಕುಟುಂಬ ಸದಸ್ಯರ ಹೆಸರಿಗೆ ಸೌರ ವಿದ್ಯುತ್ ಘಟಕಗಳನ್ನು ಕಾನೂನು ಉಲ್ಲಂಘಿಸಿ ಹಂಚಿಕೆ ಮಾಡಲಾಗಿದ್ದು, ಪ್ರಭಾವಿ ಸಚಿವರೊಬ್ಬರ ಕೈವಾಡವಿದೆ'' ಎಂದು ಬಿಜೆಪಿ ಶಾಸಕರಾದ ಸಿ.ಟಿ.ರವಿ ಹಾಗೂ ಎಸ್.ಸುರೇಶ್‌ಕುಮಾರ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

''ಹೆಬ್ಬಾಳ್ಕರ್ ಕುಟುಂಬದ ಸದಸ್ಯರಿಗೆ ಕಾನೂನು ಉಲ್ಲಂಘಿಸಿ ಸೌರ ಘಟಕಗಳನ್ನು ಹಂಚಿಕೆ ಮಾಡಲಾಗಿದ್ದು, ಒಂದೂವರೆ ಕೋಟಿ ರೂ. ಆದಾಯ ಘೋಷಣೆ ಮಾಡಿಕೊಂಡಿರುವ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಅಪೆಕ್ಸ್ ಬ್ಯಾಂಕ್‌ನಿಂದ 215 ಕೋಟಿ ರೂ. ಸಾಲ ನೀಡಲಾಗಿದೆ. ಈ ಎಲ್ಲ ಅಕ್ರಮಗಳ ಹಿಂದೆ ಪ್ರಭಾವಿ ಸಚಿವರೊಬ್ಬರ ಕೈವಾಡವಿದೆ. ಈ ಸಂಬಂಧ ದಾಖಲೆ ಸಂಗ್ರಹ ನಡೆಸಲಾಗುತ್ತಿದೆ'' ಎಂದರು.

**ಕ್ಷಮೆಗೆ ಆಗ್ರಹ:** ''2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ಆಯ್ಕೆ ಪಟ್ಟಿ ರದ್ದುಪಡಿಸಿದ್ದ ಸರಕಾರ ಯೂಟರ್ನ್ ಪಡೆದು, ಮತ್ತೆ ಅದೇ ಅಭ್ಯರ್ಥಿಗಳ ನೇಮಕಕ್ಕೆ ತೀರ್ಮಾನಿಸಿದೆ. ಈ ತಪ್ಪು ತೀರ್ಮಾನದಿಂದ ಅಭ್ಯರ್ಥಿಗಳಿಗೂ ಸರಕಾರ ತೊಂದರೆ ನೀಡಿದೆ. ಅದಕ್ಕಾಗಿ ಸರಕಾರ ಕ್ಷಮೆ ಯಾಚಿಸಬೇಕು. ಆಯ್ಕೆ ಪಟ್ಟಿಯಲ್ಲಿದ್ದ 362 ಅಭ್ಯರ್ಥಿಗಳನ್ನೂ ನೇಮಕಕ್ಕೆ ಪರಿಗಣಿಸುತ್ತಿರುವ ಕಾರಣ ಕೆಪಿಎಸ್ಸಿ ಸದಸ್ಯರ ವಿರುದ್ಧದ ಪ್ರಕರಣಗಳನ್ನೂ ಕೈಬಿಡಬೇಕು'' ಎಂದು ಆಗ್ರಹಿಸಿದರು.